# ವಿ.ಟಿ.ಯು ನ 20ನೇ ವರ್ಷದ ಸಂಸ್ಥಾಪನಾ ಸಮಾರಂಭದಲ್ಲಿ
# ಕೆ.ವಿ.ಜಿ. ಇಂಜಿನಿಯರಿಂಗ್ ಕಾಲೇಜಿನ ಮೂವರಿಗೆ ಸನ್ಮಾನ







ದಿನಾಂಕ 29-06-2018 ರಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿಯಲ್ಲಿ ವಿ.ಟಿ.ಯು. ಸ್ಥಾಪನೆಯಾಗಿ 20 ವರ್ಷ ಕಳೆದ ಬಗ್ಗೆ ಜರುಗಿದ ಸಂಸ್ಥಾಪನಾ ಸಮಾರಂಭದಲ್ಲಿ ಕೆ.ವಿ.ಜಿ. ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ। ಎನ್.ಎ. ಜ್ಞಾನೇಶ್‌ರವರಿಗೆ ವಿಶ್ವವಿದ್ಯಾಲಯದ ಕಾರ್ಯಕಾರಿ ಪರಿಷತ್ ಸದಸ್ಯರಾಗಿ ಕಾರ್ಯನಿರ್ವಹಿಸಿದಕ್ಕೆ, ಉಪಪ್ರಾಂಶುಪಾಲರಾದ ಡಾ. ಹೆಚ್. ಆರ್. ಶಿವಕುಮಾರ್‌ರವರಿಗೆ ವಿಶ್ವವಿದ್ಯಾಲಯದ ವಿಶೇಷಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದಕ್ಕೆ ಮತ್ತು ಡಾ. ಎಸ್. ಗೋವಿಂದ ಭಟ್ ಮುಖ್ಯಸ್ಥರು, ಭೌತಶಾಸ್ತ್ರ ವಿಭಾಗ ಇವರಿಗೆ ಭೌತಶಾಸ್ತ್ರ ವಿಭಾಗದ ಬೋರ್ಡ್ ಆಫ್ ಎಕ್ಸಾಮಿನೇಶನ್‌ನ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದಕ್ಕೆ ಸನ್ಮಾನವನ್ನು ಮಾಡಲಾಯಿತು. ಈ ಸಮಾರಂಭದಲ್ಲಿ ಕರ್ನಾಟಕ ರಾಜ್ಯದ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ವಜುಬಾಯಿವಾಲಾ ಮತ್ತು ಉನ್ನತ ಶಿಕ್ಷಣ ಸಚಿವರಾದ ಶ್ರೀ. ಜಿ.ಟಿ. ದೇವೆ ಗೌಡ, ವಿಶ್ರಾಂತ ಕುಲಪತಿಗಳಾದ ಡಾ। ರಾಜಶೇಖರಯ್ಯ, ಡಾ। ಬಲವೀರ ರೆಡ್ಡಿ ಡಾ। ಹೆಚ್.ಪಿ. ಕಿಂಚ ಮತ್ತು ಕುಲಪತಿಗಳಾದ ಡಾ. ಕರಿಸಿದ್ದಪ್ಪ, ಕುಲಸಚಿವರಾದ ಡಾ। ಹೆಚ್. ಎನ್. ಜಗನ್ನಾಥ ರೆಡ್ಡಿ ಮತ್ತು ಇತರ ಅಧಿಕಾರಿಗಳು ರಾಜ್ಯದ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರು ಮತ್ತು ಆಡಳಿತ ಮಂಡಳಿಯ ಸದಸ್ಯರು ಭಾಗವಹಿಸಿದ್ದರು.